ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 18-03-2017

## ಪತ್ರಿಕಾ ಆಮಂತ್ರಣ

1. ಪತ್ರಿಕಾಗೋಷ್ಠಿ:

ಕರ್ನಾಟಕ ಲಲಿತಕಲಾ ಅಕಾಡೆಮಿಯು ಏರ್ಪಡಿಸಿರುವ ಕಲಾ ಸಂಕ್ರಾಂತಿ ರಾಷ್ಟ್ರೀಯ ಪುರಸ್ಕಾರ ಪಡೆದ ಕಲಾವಿದರ ಮಾಹಿತಿ ಪ್ರಕಟಣೆಯ ಬಗ್ಗೆ, ಪತ್ರಿಕಾ ಗೋಷ್ಠಿ.

ಸ್ಥಳ: ಅಧ್ಯಕ್ಷರ ಕೊಠಡಿ, ಲಲಿತಕಲಾ ಅಕಾಡಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

ದಿನಾಂಕ: 20-03-2017 ಸೋಮವಾರ, ಸಮಯ: ಬೆಳಿಗ್ಗೆ 12-00 ಗಂಟೆಗೆ

2. ಪತ್ರಿಕಾ ಗೋಷ್ಠಿ:

"ನೀರು ಉಳಿಸಿ- ಬೆಂಗಳೂರು ಉಳಿಸಿ" ಎಂಬ ಬಗ್ಗೆ ಭರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಸಹಯೋಗದಲ್ಲಿ ಜಾಗೃತಿ ಕಾರ್ಯಕ್ರಮ

ಸ್ಥಳ: ಕೊಂಡಜ್ಜಿ ಬಸಪ್ಪ ಆಡಿಟೋರಿಯಂ, ಶಾಂತಿಗೃಹ, ಪ್ಯಾಲೇಸ್ ರಸ್ತೆ, ಬೆಂಗಳೂರು.

ದಿನಾಂಕ: 20ನೇ ಮಾರ್ಚ್ 2017, ಸೋಮವಾರ.

ಸಮಯ: ಮಧ್ಯಾಹ್ನ 3-00 ಗಂಟೆ

<u>**Intimation**</u>

3. **"Save Water – Save Bengaluru Campaign"**
   **Awareness Programme by**
   **The Bharat Scouts and Guides, Karnataka in Association with**
   **Bengaluru Water Supply and Sewerage Board.**

   **Date: 20th March 2017. Time: 3-00 P.M.**
   **Place: Kondajji Basappa Auditorium, Shanthigruha, Palace Road, BANGALORU.**

## <u>ಸ್ಥಿರಾಸ್ತಿ ಪರಿಷ್ಕೃತ ಮಾರ್ಗಸೂಚಿ ದರಪಟ್ಟಿ ಪ್ರಕಟ: ಏ. 1 ರಿಂದ ಜಾರಿ</u>

ಬೆಂಗಳೂರು, ಮಾರ್ಚ್ 18 (ಕರ್ನಾಟಕ ವಾರ್ತೆ)– ನೋಂದಣಿ ಮತ್ತು ಮುದ್ರಾಂಕ ಇಲಾಖೆಯು 2017–18 ನೇ ಸಾಲಿಗೆ ರಾಜ್ಯಾದ್ಯಂತ ಸ್ಥಿರಾಸ್ತಿಗಳ ನೋಂದಣಿಗಾಗಿ ಪರಿಷ್ಕೃತ ಮಾರ್ಗಸೂಚಿ ದರಪಟ್ಟಿಯ ಅಧಿಸೂಚನೆಯನ್ನು ಪ್ರಕಟಿಸಿದ್ದು, ಇದು 2017ರ ಏಪ್ರಿಲ್ 1 ರಿಂದ ಜಾರಿಗೆ ಬರಲಿದೆ.

ಈ ಪರಿಷ್ಕರಣೆಯಲ್ಲಿ ಹಾಲಿ ದರಗಳಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಲಾಗಿದೆ. ಹೊಸ ಬಡಾವಣೆ ಮತ್ತು ಹೊಸ ಅಪಾರ್ಟ್‌ಮೆಂಟ್ ದರಗಳನ್ನು ಸೂಕ್ತವಾಗಿ ಪ್ರಸ್ತಾಪಿಸಲಾಗಿದೆ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಪ್ರಕಟಣೆ ತಿಳಿಸಿದೆ.